MAY 03, 2025
ALL INDIA RADIO- DHARWAD
PRADESH SAMACHARA (KANNADA) 12PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 11 ವ ´ಗಳ ಆಡಳಿತಾವಧಿಯಲ್ಲಿ ಕೋವಿಡ್ ಮತ್ತು ಯುದ್ಧ ಸನ್ನಿವೇಶದಂತಹ ಪರಿಸ್ಥಿತಿ ಮಧ್ಯೆಯೂ, ದೇಶದ ಹಣದುಬ್ಬರ ಸರಾಸರಿ ದರ ಶೇಕಡ 5 ದಶಾಂಶ 1 ರಷ್ಟಿದೆ. ಯುಪಿಎ ಅವಧಿಯಲ್ಲಿ ಹಣದುಬ್ಬರ ಶೇಕಡ 12 ರ ವರೆಗೆ ಏರಿಕೆಯಾಗಿತ್ತು ಎಂದು ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನ ಖಾತೆ ಸಚಿವ ಪ್ರಲ್ಹಾದ ಜೋಶಿ ಹೇಳಿದರು. ಹುಬ್ಬಳ್ಳಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಚಿವರು, ಬೆಲೆ ಏರಿಕೆಗೆ ಬಿಜೆಪಿ, ಕೇಂದ್ರ ಸರ್ಕಾರ ಕಾರಣ ಎಂಬ ಸುಳ್ಳು ಆರೋಪ ಮಾಡಿರುವ ಕಾಂಗ್ರೆಸ್ ನಾಯಕರು, ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. 2025ರ ಮಾರ್ಚ್ ನಲ್ಲಿ, ದೇಶದ ಹಣದುಬ್ಬರ ಐದು ವ ´ಗಳಲ್ಲೇ ಕನಿಷ್ಠ ಶೇಕಡ 3 ದಶಾಂಶ 3, 4 ರಷ್ಟಿದೆ. ರ ್ಯಾ–ಉಕ್ರೇನ್ ಯುದ್ಧದಂತಹ, ಜಾಗತಿಕ ಅಡಚಣೆಗಳ ಮಧ್ಯೆಯೂ ಹಣದುಬ್ಬರ ಕಡಿಮೆಯಿರುವುದು ಗಮನಾರ್ಹ ಅಂಶವಾಗಿದೆ ಎಂದರು.

<><><>

ರಾಜ್ಯಾದ್ಯಂತ ಶಂಕರ ಜಯಂತಿ ಉತ್ಸವವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ವಿಜಯನಗರ ಜಿಲ್ಲೆ ಹೊಸಪೇಟೆ ನಗರದ ಶಂಕರಲಿಂಗ ದೇವಸ್ಥಾನದಲ್ಲಿ, ಶ್ರೀ ಶಂಕರಾಚಾರ್ಯ ಮೂರ್ತಿಗೆ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಹಂಪಿ ವಿದ್ಯಾರಣ್ಯ ಪೀಠದ, ವಿದ್ಯಾರಣ್ಯ ಭಾರತಿ ಮಹಾಸ್ವಾಮಿಗಳು, ಶಂಕರಾಚಾರ್ಯರ ಜೀವನ ಚರಿತ್ರೆ ಕುರಿತು ಪ್ರವಚನ ನೀಡಿದರು. ಶಂಕರಾಚಾರ್ಯರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಸಾತ್ವಿಕ ಸಮಾಜದ ಸೃಷ್ಟಿ ಸಾಧ್ಯವಿದೆ ಎಂದರು.

<><><>

ಧ್ವನಿ: ವಿದ್ಯಾರಣ್ಯ ಸ್ವಾಮಿಗಳು 35 ಸೆಕೆಂದುಗಳು

<><><>

ಮುಂಬಯಿಯ, ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿತ, ಜಾಗತಿಕ ಶ್ರಾವ್ಯ, ದೃಶ್ಯ ಹಾಗೂ ಮನೋರಂಜನಾ ಶೃಂಗಸಭೆ, ವೇವ್ಸ್ –20'25ನ 2 ನೇ ದಿನವಾದ ಇಂದು, ಸಿನಿಮಾ ಸಂಗೀತದಲ್ಲಿ ಸೂಫಿ, ಜನಪದ ಹಾಗೂ ಘಜಲ್ ಪ್ರಭಾವ ಎಂಬ ವಿಷಯದ ಕುರಿತು ಸಂವಾದ ನಡೆಯಲಿದೆ. ಗೀತ ರಚನೆಕಾರ ಪ್ರಸೂನ್ ಜೋಶಿ ಪಾಲ್ಗೊಳ್ಳಲಿದ್ದಾರೆ. ಇಂದು ಬೆಳಗ್ಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪ್ರಸಾರ ಭಾರತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಗೌರವ ದ್ವಿವೇದಿ ಪಾಲ್ಗೊಂಡರು.

<><><>

ವಿಜಯಪುರ ಕೇಂದ್ರ ಬಸ್ ನಿಲ್ದಾಣಕ್ಕೆ, ವೀರರಾಣಿ ಕಿತ್ತೂರು ಚನ್ನಮ್ಮ ಬಸ್ ನಿಲ್ದಾಣ ಎಂದು, ನಾಮಕರಣ ಮಾಡಲು, ಆದೇಶಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ವಿಜಯಪುರ ವಿಮಾನ ನಿಲ್ದಾಣಕ್ಕೆ, ವಿಶ್ವ ಗುರು ಬಸವೇಶ್ವರರ ಹೆಸರನ್ನು ನಾಮಾಂಕಿತಗೊಳಿಸಲಾಗಿದೆ. ಮಮದಾಪುರದಲ್ಲಿ ಸಾವಿರದ ಇನ್ನೂರು ಎಕರೆ ಪ್ರದೇಶವನ್ನು, 'ಪೂಜ್ಯ ಸಿದ್ಧೇಶ್ವರ ಶ್ರೀ, ಜೀವ ವೈವಿಧ್ಯತೆ ಪಾರಂಪರಿಕ ಸಂರಕ್ಷಿತ ಅರಣ್ಯ ಪ್ರದೇಶ' ಎಂದು, ಈಗಾಗಲೇ ಹೆಸರಿಸಲಾಗಿದೆ. ವಿಜಯಪುರದಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆ ಸಂದರ್ಭದಲ್ಲಿ, ಮುಖ್ಯಮಂತ್ರಿಯವರು, ರಾಣಿ ಚನ್ನಮ್ಮನವರ ಪ್ರತಿಮೆ ಅನಾವರಣಗೊಳಿಸಲಿದ್ದಾರೆ ಎಂದು, ಎಂ.ಬಿ.ಪಾಟೀಲ ಮಾಹಿತಿ ನೀಡಿದ್ದಾರೆ.

<><><>

ಕಂದಾಯ ಇಲಾಖೆ ಸೇವೆಗಳನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಗ್ರಾಮ ಆಡಳಿತ ಅಧಿಕಾರಿಗಳ ಪಾತ್ರ ಮಹತ್ತರವಾಗಿದೆ ಎಂದು ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಹೇಳಿದರು. ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ಆಯೋಜಿಸಲಾದ, ಹೊಸದಾಗಿ ನೇಮಕಗೊಂಡ 60 ಜನ ಗ್ರಾಮ ಆಡಳಿತ ಅಧಿಕಾರಿಗಳ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ನೂತನವಾಗಿ ನೇಮಕಗೊಂಡ ಅಧಿಕಾರಿಗಳು ಕರ್ತವ್ಯ ನಿಷ್ಠೆಯೊಂದಿಗೆ ಕೆಲಸ ನಿರ್ವಹಿಸಬೇಕು ಎಂದರು.

<><><>

ಧಾರವಾಡ ರಂಗಾಯಣ, ಪಂಡಿತ ಬಸವರಾಜ ರಾಜಗುರು ಬಯಲು ರಂಗಮಂದಿರದಲ್ಲಿ, ಮೂರು ದಿನಗಳ ಚಿಣ್ಣರ ಮೇಳ ನಾಟಕೋತ್ಸವ ಆಯೋಜಿಸಿದ್ದು, ಸಿಸ್ಲೇಪ್ ನಿರ್ದೇಶಕ ಬಿ.ಕೆ.ಎಸ್.ವರ್ಧನ, ಇಂದು ಸಂಜೆ 5.30ಕ್ಕೆ ಉದ್ಘಾಟಿಸುವರು.

<><><>

ನೀಟ್ ಯುಜಿ ಪರೀಕ್ಷೆ, ನಾಳೆ ಮಧ್ಯಾಹ್ನ 2 ರಿಂದ, 5 ಗಂಟೆಯ ವರೆಗೆ, ರಾಜ್ಯಾದ್ಯಂತ ನಡೆಯಲಿದೆ.

<><><>

ಪರಿಶಿಷ್ಟ ಜಾತಿಯ, ಒಳ ಮೀಸಲಾತಿ ಗಣತಿದಾರರು, ನಾಡಿದ್ದು 5ನೇ ತಾರೀಖಿನಿಂದ 24ರ ವರೆಗೆ, ಕಲಬುರಗಿ ಜಿಲ್ಲೆಯಾದ್ಯಂತ, ಮನೆಗಳಿಗೆ ಭೇಟಿ ನೀಡಿ, ಸಮೀಕ್ಷಿಸಲಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>